೧೦) ಮಲ್ಪೆ ಮಂಡಲ ಪಂಚಾಯತಿಯ ಸಮುದ್ರ ತೀರದ "ಕೊಳ" ಎಂಬ ಸ್ಥಳದಲ್ಲಿರುವ ೯೦ ಬಡಕುಟುಂಬಗಳಿಗೆ ಅವರಿರುವ ಜಾಗದ ಪಟ್ಟಾ ಹಕ್ಕು ಸಿಕ್ಕದೆ ತೊಂದರೆಯಾಗಿರುವುದು.

ಶ್ರೀ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಉಡುಪಿ ತಾಲ್ಲೂಕಿನ ಮಲ್ಪೆ ಮಂಡಲ ಪಂಚಾಯತಿಯಲ್ಲಿ ಮಲ್ಪೆ ಸಮುದ್ರ ತೀರದಲ್ಲಿರುವ 'ಕೊಳ' ಎಂಬ ಸ್ಥಳದಲ್ಲಿರುವ ಸುಮಾರು ೯೦ ಕುಟುಂಬಗಳಿಗೆ ಅವರಿರುವ ಜಾಗದ ಪಟ್ಟಾ ಹಕ್ಕು ಸಿಕ್ಕಿಲ್ಲ. ಸುಮಾರು ೩೦ ವರ್ಷಗಳ ಹಿಂದೆ ನಿರುಪಯೋಗಿ ಉಪ್ಪು ನೀರಿನ ಹೊಂಡವಾಗಿದ್ದ ಈ 'ಕೊಳ'ವನ್ನು ಸ್ಥಳೀಯರು ಕಸ, ಕಡ್ಡಿ, ಕಲ್ಲು ಮಣ್ಣು ತುಂಬಿಸಿದ್ದರಿಂದ ಕಾಲಾಂತರದಲ್ಲಿ ಆ ಹೊಂಡ ಮುಚ್ಚಿ ಹೋಯಿತು. ಕಡಲ ತೀರದ ಬಡವರು ಈ ಸ್ಥಳದಲ್ಲಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಾ ಇದ್ದಾರೆ. ಮನೆ ನಿವೇಶನದ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದರು, ಗ್ರಾಮ ಲೆಕ್ಕಿಗರಿಗೆ ಅರ್ಜಿ ಹಾಕಿ ಮನವಿ ಮಾಡಿದ್ದಕ್ಕೆ ಲೆಕ್ಕವೇ ಇಲ್ಲ. ಕಂದಾಯ ನಿರೀಕ್ಷಕರ ನೀರಿಕ್ಷೆ ಮಾಡಿ ಸಾಕಾಯಿತು. ತಾಲ್ಲೂಕು ತಹಸೀಲ್ದಾರರು ಅರ್ಜಿಗಳ ತಪಸೀಲು ಮಾಡಿಲ್ಲ. ತಪಾಸಣೆ ಮಾಡಿದರೂ ಪ್ರಯೋಜನವಾಗಿಲ್ಲ. ಮನವಿ ಕೊಳುಹಿಸಿದ ಎ.ಸಿ.ಡಿ.ಸಿ. ಮಂತ್ರಿಗಳು ಯಾರಿಂದಲೂ ಕಳೆದ ಹತ್ತಾರು ವರ್ಷಗಳಿಂದ ಈ 'ಕೊಳ'ದ ಕುಳಗಳಿಗೆ ಪರಿಹಾರ ಸಿಕ್ಕಿಲ್ಲ. ಈ ಹಕ್ಕುಪತ್ರ ದೊರೆತಿಲ್ಲ. ಆ ಪರಿಸರದಲ್ಲಿರುವ ಕೆಲವು ಪ್ರಭಾವಿಗಳಿಗೆ ಹಕ್ಕುಪತ್ರ ದೊರೆತಿದೆ. ಹಾಗಾದಲ್ಲಿ ಶಕ್ತಿಯಿಲ್ಲದ ಬಡವರ ಗೋಳನ್ನು ಕೇಳುವವರಿಲ್ಲವೇ ? ಸರಕಾರದವರು ಇನ್ನಾದರೂ ಎಚ್ಚೆತ್ತು ಬಡವರಿಗಾದ ಅನ್ಯಾಯವನ್ನು ಸರಿಪಡಿಸುವರೇ ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ನೀಡಿ ನ್ಯಾಯ ದೊರಕಿಸಿಕೊಡಬೇಕೆಂದು ಘನ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಸ. ನಂ. ೨೬ಳಗಲ್ಲಿಯ ಮಲ್ಪೆಯ ಕೊಳ ಎಂಬಲ್ಲಿ ಒಟ್ಟು ೧೧೮ ಜನರು ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡು ತೆಂಗಿನ ಸಸಿಗಳನ್ನು ನೆಟ್ಟಿರುತ್ತಾರೆ. ೧೬–೧೨–೮೩ರ ನಂತರ ಒಟ್ಟು ೩೫ ಜನರು ಮಾತ್ರ ಅತಿಕ್ರಮವನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿರುತ್ತಾರೆ. ಉಳಿದ ೮೩ ಜನರು ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಇಬ್ಬರನ್ನು ಹೊರತು ಉಳಿದವರೆಲ್ಲರೂ ೫ ಸೆಂಟ್‌ಗಿಂತ ಹೆಚ್ಚಿನ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ. ಸದನದ ಮುಂದಿರುವ ಭೂ ಕಂದಾಯ ಕಾಯಿದೆ ಸೆಕ್ಷನ್ ೯೪ಕ್ಕೆ ತಿದ್ದುಪಡಿ ವಿಧೇಯಕವು ಪಾಸಾದ ನಂತರ ಸಕ್ರಮಗೊಳಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

೧೧) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಯೋಮಿತಿಯ ಆಧಾರವನ್ನು ಪರಿಗಣಿಸದೇ ಇರುವುದು.

ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯ ಸರಕಾರವು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಅರ್ಜಿಗಳನ್ನು ಕರೆದಿರುವುದು ಮತ್ತು ಸಂದರ್ಶನಕ್ಕೂ ಆದೇಶ ಕೊಟ್ಟಿರುವುದು ಸರಿಯೆಷ್ಟೆ. ಆದರೆ ಸರಕಾರವು ಬರೇ ಅಂಕಗಳ ಆಧಾರದ ಮೇಲೆ ಸಂದರ್ಶನ ಕೊಟ್ಟರೆ ವಯೋಮಿತಿ ಮೀರಿದವರಿಗೆ ಬಹಳ ತೊಂದರೆಯಾಗುತ್ತದೆ. ಹಿಂದೆ ಅಂದರೆ ೧೯೮೩–೮೪ರಲ್ಲಿ ಸರಕಾರ ಮೊದಲು ೨೯ ವರ್ಷ ತುಂಬಿದವರಿಗೆ ಮೊದಲು ಅರ್ಜಿತೆ ನೀಡಲಾಗಿತ್ತು. ನಂತರ ವಯೋಮಿತಿ ಆಧಾರ ಮುಂದಿದ ಮೇಲೆ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿತ್ತು. ಈಗ ಆದರ ವಿರುದ್ಧವಾಗಿ ಸರಕಾರ ಆಜ್ಞೆ ಮಾಡಿರುತ್ತೆ. ಈಗ ವಯೋಮಿತಿ ಮುಗಿಯುತ್ತಾ ಬಂದಿರುವವರ ಗತಿ ಬೀದಿ ಪಾಲಾಗುವ ಸ್ಥಿತಿ ಬಂದಿರುತ್ತದೆ. ಇದೇ ೧೯೮೩-೮೪ರ ಆಯ್ಕೆ ಮಾಡಿದಾಗ ಬರೇ ಅಂಕಗಳ ಆಧಾರದ ಮೇಲೆ ಸಂದರ್ಶನ ಮಾಡಿದ್ದರೆ ಆಗ ವಯೋಮಿತಿ ಆಗಿರುವ ಅವರುಗಳ ಸಂದರ್ಶನದಲ್ಲಿ ಆಯ್ಕೆ ಆಗುಂತಿದ್ದರು. ಆದರೆ ೧೯೮೩–೮೪ರಲ್ಲಿ ೨೯ ವರ್ಷ ತುಂಬಿಲ್ಲವೆಂದು ಅವರುಗಳಿಗೆ ಸಂದರ್ಶನ ನೀಡಲಿಲ್ಲ. ಈಗ ಅವರುಗಳಿಗೆ ಅಂಕಗಳು ಇಲ್ಲವೆಂದು ಸಂದರ್ಶನ ಕೊಡುವುದು ಕಷ್ಟವಾಗುತ್ತದೆ. ಈ ರೀತಿ ಸರಕಾರ ತಮ್ಮ ಮನಸಾ ಇಚ್ಛೆ ಕಾನೂನು ಜಾರಿಗೆ ತಂದರೆ ಅವರುಗಳು ಬಡ ಕುಟುಂಬದಲ್ಲಿ ಹುಟ್ಟಿ ಶಿಕ್ಷಕರ

ಹುದ್ದೆಯನ್ನೇ ನಂಬಿಕೊಂಡು ಬಂದಿರುವುದರಿಂದ ಈಗ ಅವರಿಗೆ ಯಾವ ಮಾರ್ಗದಲ್ಲಿಯೂ ಜೀವನ ಸಾಗಿಸುವುದು ಕಷ್ಟವಾಗಿ ಕಂಡು ಬರುತ್ತದೆ, ಮೇಲ್ಕಂಡವರಿಗೆ ಈಗಾಗಲೇ ವಯೋಮಿತಿ ಕಾಲ ಬಂದಿದೆ. ಅವರುಗಳು ತರಬೇತಿ ಹೊಂದಿ ೧೦-೧೨ ವರ್ಷಗಳಾಗಿವೆ. ಆದ್ದರಿಂದ ಅವರಂಗಳಿಗೆ ದಯವಾಡಿ ಸರಕಾರದ ಈ ನೀತಿಯನ್ನು ಪ್ರತಿಭಟಿಸುತ್ತಾ ಅವರಿಗೆ ಆಗಿರು ತೊಂದರೆ ಮತ್ತು ಜೀವನ ಮಾರ್ಗಕ್ಕೆ ವ್ಯತಿಯನ್ನು ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ. ಈ ಮೊದಲೇ ಜನತಾ ಸರಕಾರ ಕುಟುಂಬವೊಂದಕ್ಕೆ ಉದ್ಯೋಗ ಕೊಡುತ್ತೇವೆಂದು ಘೋಷಿಸಿರುತ್ತದೆ. ಆದ್ದರಿಂದ ಈಗ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸರಕಾರದ ಆಜ್ಞೆಯನ್ನು ಬದಲಾಯಿಸಿ ಮೊದಲು ವಯೋಮಿತಿ ದಾಟುವವರಿಗೆ ಅನುಕೂಲವಾಗುವಂತೆ ಮಾಡಿಕೊಡಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಸರಕಾರ ಪರಿಶೀಲನೆ ಮಾಡುತ್ತದೆ.

೧೨) ಬೋಗಸ್ ರೇಷನ್ ಕಾರ್ಡುಗಳನ್ನು ಪತ್ತೆ ಹಚ್ಚಲು ಕ್ರಮ

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಸರಕಾರದವರು ಬೋಗಸ್ ರೇಷನ ಕಾರ್ಡುಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ. ಈ ರೀತಿ ಕೈಗೊಂಡ ಕ್ರಮ ದಿಂದಾಗಿ ಯಾವ ಯಾವ ಜಿಲ್ಲೆಯಿಂದ ಎಷ್ಟೆಷ್ಟು ಬೋಗಸ್ ರೇಷನ್ ಕಾರ್ಡುಗಳು ಪತ್ತೆಯಾಗಿವೆ ಹಾಗೂ ಈ ರೀತಿ ಬೋಗಸ್ ರೇಷನ್ ಕಾರ್ಡು ಹೊಂದಿದ್ದವರ ಮೇಲೆ ಸರಕಾರ ಯಾವ ಕ್ರಮ ಕೈಗೊಳ್ಳಲು ಯೋಚಿಸಿದೆ ? ಇನ್ನೂ ಉಳಿದಿರಬಹುದಾದ ಬೋಗಸ್ ರೇಷನ್ ಕಾರ್ಡುಗಳ ಪತ್ತೆಗೆ ಯಾವ ಕ್ರಮ ಕೈಗೊಳ್ಳಲಾಗುವುದು? ಈಗಾಗಲೇ ಪತ್ತೆಯಾಗಿರುವ ಬೋಗಸ್ ಕಾರ್ಡುಗಳಲ್ಲಿ ರೇಷನ್ ಅಂಗಡಿಯವರೇ ಇಟ್ಟುಕೊಂಡಿದ್ದಂತಹ ಬೋಗಸ್ ರೇಷನ್ ಕಾರ್ಡುಗಳು ಸೇರಿವೆಯೇ ? ಇಲ್ಲದಿದ್ದಲ್ಲಿ, ಇಂತಹ ಕಾರ್ಡುಗಳನ್ನು ಪತ್ತೆಹಚ್ಚಲು ಯಾವ ಕ್ರಮಕೈಗೊಳ್ಳಲಾಗುವುದು ? ರಾಜ್ಯದ ಎಲ್ಲಾ ಭಾಗದಲ್ಲಾ ರೇಷನ್ ಕಾರ್ಡುಗಳಿಗೆ ಫೋಟೋ ಹಚ್ಚಲು ಸರಕಾರದವರು ತೀರ್ಮಾನಿಸಿರುವರೆ ? ಹಾಗಿದ್ದಲ್ಲಿ ಈ ಬಗ್ಗೆ ಕೈಕೊಂಡ ಕ್ರಮವೇನು ? ಈ ಎಲ್ಲ ವಿಷಯಗಳ ಬಗ್ಗೆ ಸದನಕ್ಕೆ ಸಂಪೂರ್ಣ ಮಾಹಿತಿಗಳನ್ನೊಳಗೊಂಡ ಹೇಳಿಕೆಯನ್ನು ನೀಡಬೇಕಾಗಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮತಿ ಸುಮಾ ವಸಂತ ಅವರು ನಿಯಮ ೩೩ರಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.